ಓ.ಎಸ್. ನಂಃ 140/2020

ಪಿ.ಡಬ್ಲ್ಯೂಃ 2

**ದಿನಾಂಕ 04.12.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಪಿ.ಡಿ.ವಕೀಲರಿಂದಃ</u>**

1. ವಾದಿಯು ನನ್ನ ಅಕ್ಕನ ಗಂಡ ಅಂದರೆ ನನ್ನ ಖಾಸ ಭಾವ ಎಂದರೆ ಸರಿ. ದಾವಾ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿ ನನ್ನ ಆಸ್ತಿ ಇದೆ. ವಾದ ಪತ್ರದಲ್ಲಿ ದಾವಾ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿ ನನ್ನ ಆಸ್ತಿ ಇದೆ ಎಂದು ವಾದಿ ಬರೆಸಿರುತ್ತಾರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ದಕ್ಷಿಣ ದಿಕ್ಕಿನಲ್ಲಿ ಇರುವ ಸಣ್ಣಮ್ಮ ಮತ್ತು ಸುಬ್ಬೇಗೌಡ ಇವರು ನನ್ನ ತಂದೆ ಮತ್ತು ತಾಯಿ.

2. ಇದೇ ಪ್ರತಿವಾದಿಯ ವಿರುದ್ಧ ನನ್ನ ತಾಯಿಯಾದ ಸಣ್ಣಮ್ಮರವರು ಇದೇ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ 156/2020 ರ ದಾವೆಯನ್ನು ಹೂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ದಾವೆಯು ಬೇರೆ ಆಸ್ತಿಗೆ ಸಂಬಂಧಪಟ್ಟಂತೆ ಹೂಡಿರುತ್ತಾರೆ ಎಂದು ನುಡಿದಿರುತ್ತಾರೆ. ಸಣಬಿನಕುಪ್ಪೆ ಗ್ರಾಮದ ಸರ್ವೇ ನಂಬರ್ 23/2 ರ ಆಸ್ತಿಗೆ ಸಂಬಂದಪಟ್ಟಂತೆ ನನ್ನ ತಾಯಿ ಅಸಲು ದಾವೆ ಸಂಖ್ಯೆ 156/2020 ರ ದಾವೆಯನ್ನು ಹೂಡಿರುತ್ತಾರೆ. ಸಣಬಿನಕುಪ್ಪೆ ಗ್ರಾಮದ ಸರ್ವೇ ನಂಬರ್ 23/10 ರ 18 ಗುಂಟೆ ಜಮೀನಿಗೂ ಮತ್ತು ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ.

3. ಸರ್ವೇ ನಂಬರ್ 23/1 ರ ಆಸ್ತಿಯ ಸಂಬಂಧ ವಾದಿ ಈ ದಾವೆಯನ್ನು ಹೂಡಿರುತ್ತಾರೆ. ಸರ್ವೇ ನಂಬರ್ 23 ರಲ್ಲಿ ಎಷ್ಟು ಪೋಡುಗಳಿವೆ ಎಂದು ನನಗೆ ಗೊತ್ತಿಲ್ಲ. ಸರ್ವೇ ನಂಬರ್ 22/2 ಹಾಗೂ ಸರ್ವೇ ನಂಬರ್ 23/2 ರ ಸರ್ವೇ ನಂಬರುಗಳಲ್ಲಿ ಮಾತ್ರ ನಮಗೆ ಸೇರಿದ ಆಸ್ತಿಗಳಿವೆ.

4. ತಿಮ್ಮೇಗೌಡ ಬಿನ್ ಸಣ್ಣೇಗೌಡ ಇವರು ವಾದಿಯ ಸಂಬಂಧಿ. ಈ ದಾವೆ ಆಸ್ತಿಯ ಸಂಬಂಧ ವಾದಿ ಮತ್ತು ಸದರಿ ತಿಮ್ಮೇಗೌಡ ಬಿನ್ ಸಣ್ಣೇಗೌಡರ ಮಧ್ಯೆ ಕೆ ಆರ್ ನಗರದ

ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಪಾಲು ದಾವೆ ನಡೆಯುತ್ತಿದೆ ಎಂದರೆ ಸರಿ. ನನಗೂ ಮತ್ತು ಪ್ರತಿವಾದಿಗೂ ಹಾಗೂ ನನ್ನ ಭಾವನಾದ ವಾದಿಗೂ ಮತ್ತು ಪ್ರತಿವಾದಿಗೂ ವೈಶಮ್ಯ ಇರುವುದರಿಂದ ನಾನು ಪ್ರತಿವಾದಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಯಾವುದೇ ದಿಕ್ಕಿನಲ್ಲಿಯು ಸಹ ನನ್ನ ಆಸ್ತಿ ಇರದಿದ್ದರು ಸಹ ವಾದಿ ನನ್ನ ಭಾವನಾಗಿರುವ ಕಾರಣ ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**